ರಮೇಶ: ದೃಢ ಮನಸ್ಸಿದ್ದರೆ ಕುಡಿತ ಬಿಡೋದು ಬಹಳ ಸುಲಭ.
ಸುರೇಶ: ಹೌದಾ, ನೀನು ಬಿಟ್ಟಿದ್ದೀಯಾ?
ರಮೇಶ: ಹೌದು ಬೇಕಾದಷ್ಟು ಬಾರಿ ಬಿಟ್ಟಿದ್ದೀನಿ.

★★★

ಪುಂಡ: ಪತ್ನಿಯ ಕಾಲು ಒತ್ತುವುದು ಸೇವೆಯೋ ಪ್ರೇಮವೋ?
ಗುಂಡ: ಸ್ವಂತ ಪತ್ನಿಯದ್ದಾದರೆ ಸೇವೆ. ಅನ್ಯನ ಪತ್ನಿಯದ್ದಾದರೆ ಪ್ರೇಮ.

★★★

ಸಲಹೆಗಾರ: ನೀವಿಗ ಮೂವರು ಹುಡುಗಿಯರನ್ನು ಪ್ರೀತಿ ಮಾಡುತ್ತಿದ್ದೀರಿ ಎಂದು ಕಲ್ಪನೆ ಮಾಡಿಕೊಳ್ಳಿ
ಗುಂಡ: ಸರಿ, ಹಾಗೆಯೇ ಕಲ್ಪನೆ ಮಾಡಿಕೊಳ್ಳುವೆ.
ಸಲಹೆಗಾರ: ಆ ಮೂವರ ಪೈಕಿ ಒಬ್ಬಳನ್ನು ಮದುವೆಯಾಗುತ್ತಿದ್ದೀರಿ ಎಂದು ಕಲ್ಪನೆ ಮಾಡಿಕೊಳ್ಳಿ.
ಗುಂಡ: ಆಯ್ತು ಮಾಡಿಕೊಂಡೆ.
ಸಲಹೆಗಾರ: ಮದುವೆ ಸುದ್ದಿ ತಿಳಿ ಮತ್ತಿಬ್ಬರು ಹುಡುಗಿಯರು ಕಲ್ಯಾಣ ಮಂಟಪದ ಕಡೆಗೆ ಬರುತ್ತಿದ್ದಾರೆ ಎಂದುಕೊಳ್ಳಿ. ಆಗ ನೀವು ಏನು ಮಾಡುತ್ತೀರಿ.
ಗುಂಡ: ಕಲ್ಪನೆ ಮಾಡುವುದನ್ನು ಕೂಡಲೇ ನಿಲ್ಲಿಸಿಬಿಡುತ್ತೇನೆ

★★★

ಕಂಡಕ್ಟರ್: ಎಲ್ಲಿಗೋ ದೂರ ಪ್ರಯಾಣ ಹೊರಟಂತಿದೆ?
ಪ್ರಯಾಣಿಕ: ಹೌದು ಬೆಂಗಳೂರಿಗೆ ಹೋಗುತ್ತಿದ್ದೇನೆ.
ಕಂಡಕ್ಟರ್: ಏನ್ ಕಚೇರಿ ಕೆಲಸದ ನಿಮಿತ್ತವಾ?
ಪ್ರಯಾಣಿಕ: ಅಲ್ಲ, ಅಲ್ಲಿ ಓಬಳೇಶಿ ಅವರ ಭಾಷಣ ಕಾರ್ಯಕ್ರಮಕ್ಕೆ ಹೋಗುತ್ತಿದ್ದೇನೆ.
ಕಂಡಕ್ಟರ್: ಅಯ್ಯೋ ಆ ಮೂರ್ಖನ ಭಾಷಣ ಕಾರ್ಯಕ್ರಮಕ್ಕೆ ಅಷ್ಟು ದೂರ ಹೋಗುತ್ತೀರಾ?
ಪ್ರಯಾಣಿಕ: ಹೌದು, ಹೋಗದೆ ವಿಧಿ ಇಲ್ಲ. ಏಕೆಂದರೆ ಆ ಮೂರ್ಖ ಓಬಳೇಶಿ ನಾನೇ!

(ಸಂಗ್ರಹ) **ಕುಬೇರಪ್ಪ ಎಂ. ವಿಭೂತಿ,**
ಹರಿಹರ

ಮಂಜು: ಐ ಲವ್ ಯು. ಈಗ ನೀನು ನನಗೆ ಹೇಳು.
ಹುಡುಗಿ: ನಾನೀಗಲೇ ಸರ್‌ಗೆ ಹೇಳುವೆ.
ಮಂಜು: ಹುಚ್ಚಿ, ಸರ್‌ಗೆ ಮದುವೆ ಆಗಿದೆ.

★★★

ಶಿಕ್ಷಕ: ಇಷ್ಟು ದಿವಸ ಎಲ್ಲಿದ್ದೆ?
ಚಿಂಟು: ಸರ್, ಬರ್ಡ್ ಫ್ಲೂ ಆಗಿತ್ತು.
ಶಿಕ್ಷಕ: ಅದು ಪಕ್ಷಿಗಳಿಗೆ ಆಗುತ್ತದೆಯಲ್ಲ. ನಿನಗೆ ಹೇಗೆ ಆಯಿತು?
ಚಿಂಟು: ಸರ್, ತಾವು ನನಗೆ ಮನುಷ್ಯ ಅಂತ ತಿಳಿದೇ ಇಲ್ಲ. ಯಾವಾಗ್ಲೂ ಕೋಳಿ ಮಾಡಿ ಕೂಡಿಸ್ತಿದ್ರಿ. ಎಲ್ಲಾ ನಿಮ್ಮಿಂದಲೆ.

★★★

ಪತ್ನಿ: ಲಗ್ನಕ್ಕೂ ಮುಂಚೆ ಹೊಟೇಲು, ಸಿನಿಮಾ ಮತ್ತೆಲ್ಲೆಲ್ಲೋ ಕರ್ಕೊಂಡು ಹೋಗ್ತಿದ್ರಿ. ಲಗ್ನ ಆದ ಮ್ಯಾಲ ಮನೆ ಹೊರ್ಗೂ ಕರೆದುಕೊಂಡು ಹೋಗ್ತಿಲ್ಲ ಯಾಕ್ರೀ.
ಪತಿ: ಚುನಾವಣೆ ಆದ ಮೇಲೆ ಎಲ್ಲಾದ್ರೂ ಪ್ರಚಾರ ಭಾಷಣ ಮಾಡ್ತಾರೇನು?

(ಸಂಗ್ರಹ) **ಬಾ.ನಾ. ಸೊಲ್ಲಾಪುರೆ,** ಬೀದರ್




ॐ ✝ ☪ ಸರ್ವೇಜನಃ ಸುಖಿನೋ ಭವಂತುಃ ॐ ✝ ☪
**ಸಮಸ್ಯೆ ನಿಮ್ಮದು ಪರಿಹಾರ ನಮ್ಮದು**

ಶ್ರೀ ಸಾಯಿಬಾಬ ಉಪಾಸಕರು
ದಕ್ಷಿಣ ಭಾರತದಾದ್ಯಂತ ಜನಮನ್ನಣೆ ಪಡೆದಿರುವ ವಂಶಪಾರಂಪರಿಕ
**ವಶೀಕರಣ ಮಾಂತ್ರಿಕರು**
**ಶ್ರೀಯುತ ಪರಶುರಾಮ್ ಗುರೂಜಿ**
ಸ್ತ್ರೀ ಪುರುಷ ವಶೀಕರಣ, ಸತಿಪತಿ ಕಲಹ, ಡೈವೋರ್ಸ್ ಪ್ರಾಬ್ಲಮ್, ಸಾಲಬಾಧೆ, ಪ್ರೇಮವಿಚಾರ, ಸಂತಾನಫಲ, ವ್ಯಾಪಾರಾಭಿವೃದ್ಧಿ, ಜಮೀನು ವಿಚಾರ, ಕೋರ್ಟ್‌ಕೇಸ್, ಮಾಟಮಂತ್ರ, ಪ್ರೇತಬಾಧೆ ಇನ್ನಿತರ ನಿಮ್ಮ ಸಮಸ್ಯೆ ಏನೇ ಇರಲಿ ಎಷ್ಟೇ ಕಠಿಣವಾಗಿರಲಿ ಕೇರಳ ಮತ್ತು ಕೊಳ್ಳೇಗಾಲದ 16ನೇ ಶತಮಾನದ ಪ್ರಾಚೀನ ತಾಳೆಗ್ರಂಥದ ರಹಸ್ಯವಾದ ಮಹಾರುದ್ರಶೂಲ ಪ್ರಣವಶಕ್ತಿಯಿಂದ
**ಕೇವಲ 5 ದಿನದಲ್ಲಿ 100% ಪರಿಹಾರ ಶತಸಿದ್ಧ**
ನೀವು ಎಷ್ಟೋ ದೈವ, ದೇವಸ್ಥಾನ ಮತ್ತು ಜ್ಯೋತಿಷ್ಯರಲ್ಲಿ ಕೇಳಿ ಪರಿಹಾರ ಸಿಗದೆ ನೊಂದಿದ್ದರೆ ಶೀಘ್ರ ಪರಿಹಾರಕ್ಕಾಗಿ ಇವರನ್ನೊಮ್ಮೆ ಭೇಟಿಮಾಡಿ.
ಇಲ್ಲಿ ಹೇಳುವ ವಿಷಯವನ್ನು ಗುಪ್ತವಾಗಿಡಲಾಗುವುದು ಹಾಗೂ ಗುರೂಜಿಯವರಲ್ಲಿ ನಿಸ್ಸಂಕೋಚದಿಂದ ಮಾತನಾಡಲು ಕರೆಮಾಡಿ:
**9620444460**
ಖಾಯಂ ಮನೆ ವಿಳಾಸ: **ಜೈಬಾಲಾಜಿ ಜ್ಯೋತಿಷ್ಯಂ**
ಬನಶಂಕರಿ ದೇವಸ್ಥಾನದ ಹತ್ತಿರ, ಮುಖ್ಯಬಸ್‌ನಿಲ್ದಾಣದ ಪಕ್ಕದಲ್ಲಿ, ಬನಶಂಕರಿ ಬೆಂಗಳೂರು.
ವಿಶೇಷ ಸೂಚನೆ: ಈ ಪೇಪರ್ ಕಟ್ಟಿಂಗ್ ತಂದವರಿಗೆ ಮುಜರಾಯಿ ಇಲಾಖೆ ಮತ್ತು ಧಾರ್ಮಿಕ ದತ್ತಿ ಇಲಾಖೆ ಹಾಗೂ ಮಾಡಾಯಿಕಾವ್ ಭಗವತಿ ದೇವಸ್ಥಾನಂ (ತಳಿಪರಂ) ಕೇರಳ ವತಿಯಿಂದ ಉಚಿತ ಸೇವೆಗಳು ಮತ್ತು ಪರಿಹಾರಗಳು ಲಭ್ಯವಿದೆ.